ಅ) ರಾಜ್ಯದಲ್ಲಿನ ಕಾನ್ವೆಂಟ್ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ವಂತಿಗೆಯನ್ನು ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಬೆಂಗಳೂರು, ಮೈಸೂರು, ಮುಂತಾದ ನಗರಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಪ್ರವೇಷಕ್ಕೆ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅದನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ದಿನಾಂಕ : 01-6-95ರಿಂದ 1988ರ ಕರ್ನಾಟಕ ಶಿಕ್ಷಣ ಅಧಿನಿಯಮದವು ಜಾರಿಗೆ ಬಂದಿದೆ. ಸದರಿ ಅಧಿನಿಯಮದ ಸೆಕ್ಷನ್ 51ರನ್ವಯ ಪ್ರವೇಶ ಹಂತದಲ್ಲಿ ಮತ್ತು ನಂತರದಲ್ಲಿ ನಿಗಧಿಪಡಿಸಿದ ಫೀಜು ಅಲ್ಲದೆ, ಇತರೆ ರೂಪದಲ್ಲಿ ಹಣ ವಸೂಲಿ ಮಾಡಲು ನಿಷೇದವಿದೆ. ಇದನ್ನು ಉಲ್ಲಂಘಿಸಿ ಅಪರಾಧ ಎಸಗಿದ ವ್ಯಕ್ತಿ: ಸಂಸ್ಥೆಗಳಿಗೆ ಸೆರೆವಾಸ:ಹಣದ ರೂಪದಲ್ಲಿ ದಂಡನೆ ವಿಧಿಸಲು ಅವಕಾಶ ಮಾಡಿದೆ. ಈ ಬಗ್ಗೆ ಅವಶ್ಯವಿರುವ ನಿಯಮಾವಳಿಗಳನ್ನು ರಚಿಸಲಾಗುತ್ತಿದೆ. ಇದಾದನಂತರ, ನಿಯಮಾನುಸಾರ ವಂತಿಗೆ ನಿಲ್ಲಿಸುವ ಬಗ್ಗೆ ಕಟ್ಟುನಿಟ್ಟು ಕ್ರಮ ಕೈಗೊಳ್ಳಲಾಗುವುದು.

ಆ) ಗಮನಕ್ಕೆ ಬಂದಿರುವುದಿಲ್ಲ.

ರಾಜ್ಯದ ಆಸ್ಪತ್ರೆಗಳಿಗೆ ವೈದ್ಯರ ಕೊರತೆ

930 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಆಸ್ಪತ್ರೆಗಳಲ್ಲಿ ಕೊರತೆಯಿರುವ ವೈದ್ಯರ ಸಂಖ್ಯೆ ಎಷ್ಟು?

ಆ) ಮಂಡ್ಯ ಜಿಲ್ಲೆಯ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ ಮತ್ತು ವೈದ್ಯರ ಕೊರತೆ ಎದುರಿಸುತ್ತಿರುವ ಪ್ರಾಥಮಿಕ ಮತ್ತು ಹಿರಿಯ ಆರೋಗ್ಯ ಘಟಕಗಳೆಷ್ಟು? (ತಾಲ್ಲೂಕುವಾರು ವರದಿ ನೀಡುವುದು).

ಇ) ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆಯೇ? ಇಲ್ಲದಿದ್ದಲ್ಲಿ ವಿಳಂಬವಾಗಲು ಕಾರಣವೇನು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 561

ಆ) 1) ವೈದ್ಯರುಗಳು ಖಾಲಿ ಇರುವ ಒಟ್ಟು ಸಂಖ್ಯೆ : 28

2) ಖಾಲಿ ಇರುವ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರ: ಪ್ರಾಥಮಿಕ ಆರೋಗ್ಯ ಘಟಕ:

18

ಇ) ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ನೇಮಿಸಲು ಈಗಾಗಲೇ ಆದೇಶ

ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳ ತಾಲ್ಲೂಕುವಾರು ವಿವರಪಟ್ಟಿ

1. ಮಂಡ್ಯ ತಾಲ್ಲೂಕು :

   1) ಕೊತ್ತಾತ್ತಿ

2. ನಾಗಮಂಗಲ ತಾಲ್ಲೂಕು :

   1) ಚೀಣ್ಯಾ
   2) ಬೋಗಾದಿ
   3) ದೇವಲಾಪುರ
   4) ದರದನಹಳ್ಳಿ

3. ಕೆ.ಆರ್. ಪೇಟೆ ತಾಲ್ಲೂಕು :

   1) ಬಳ್ಳಿಕೆರೆ
   2) ಆನೆಗೋಳ
   3) ಬಂಡಿಹೊಳೆ
   4) ಗಂಜಿಗೆರೆ
   5) ಸಾರಂಗಿ
   6) ಆಗಾಲಯಾ
   7) ಸೋಮನಹಳ್ಳಿ
   8) ಮದುವಿನಕೋಡಿ

4. ಮದ್ದೂರು ತಾಲ್ಲೂಕು :

   1) ಕೆಸ್ತೂರು

5. ಮಳವಳ್ಳಿ ತಾಲ್ಲೂಕು :

   1) ಯತ್ತಂಬಾಡಿ
   2) ನಿಟ್ಟೂರು
   3) ಪೂರಿಗಾಲಿ